# 2022–23 ನೇ ಸಾಲಿನ 5 ಮತ್ತು 8ನೇ ತರಗತಿಯ ಮೌಲ್ಯಾಂಕನ

## Frequently asked Questions

### ಸಂಭವನೀಯ ಪ್ರಶ್ನೆಗಳು ಮತ್ತು ಉತ್ತರಗಳು

**ಪ್ರಶ್ನೆ ಸಂಖ್ಯೆ 1: ಕೆ.ಎಸ್.ಕ್ಯು.ಎ.ಎ.ಸಿ ವತಿಯಿಂದ ರಾಜ್ಯದಾದ್ಯಂತ 5 ಮತ್ತು 8ನೇ ತರಗತಿ ಮಕ್ಕಳಿಗೆ ನಡೆಸುತ್ತಿರುವ ಮೌಲ್ಯಾಂಕನ–ಮಾರ್ಚ್ 2023 ರ ಪರೀಕ್ಷೆಯು ಸರ್ಕಾರಿ ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳಿಗೆ ಸಂಬಂಧಿಸಿದೆಯೇ?**

**ಉತ್ತರ:** ರಾಜ್ಯ ಪಠ್ಯಕ್ರಮ ಅನುಸರಿಸುತ್ತಿರುವ ರಾಜ್ಯದ ಎಲ್ಲಾ ಶಾಲೆಗಳ 5 ಮತ್ತು 8ನೇ ತರಗತಿ ವಿದ್ಯಾರ್ಥಿಗಳನ್ನು ಮೌಲ್ಯಾಂಕನಕ್ಕೆ(ಸ.ಮೌ–2) ಒಳಪಡಿಸಲಾಗುತ್ತದೆ.

**ಪ್ರಶ್ನೆ ಸಂಖ್ಯೆ 2: ಮೌಲ್ಯಾಂಕನಕ್ಕೆ ಪರಿಗಣಿಸಿರುವ ಪಠ್ಯವಸ್ತು**

**ಉತ್ತರ:** ಮೌಲ್ಯಾಂಕನ (SA-2)ಕ್ಕೆ ನವಂಬರ್ 2022 ರ ಮಾಹೆಯಿಂದ ಮಾರ್ಚ್ 2023 ರ ಮೊದಲನೇ ವಾರದವರೆಗಿನ ಪಠ್ಯವಸ್ತುವನ್ನು ಪರಿಗಣಿಸಲಾಗಿದೆ

**ಪ್ರಶ್ನೆ ಸಂಖ್ಯೆ 3: 5ನೇ ತರಗತಿಗೆ ಪರಿಗಣಿಸಿರುವ ವಿಷಯಗಳು ಮತ್ತು ಭಾಷೆಗಳು.**

**ಉತ್ತರ:** **ಪ್ರಥಮ ಭಾಷೆ–** ಕನ್ನಡ, ಇಂಗ್ಲೀಷ್, ಹಿಂದಿ, ಉರ್ದು, ಮರಾಠಿ, ತಮಿಳು, ತೆಲುಗು

**ದ್ವಿತೀಯ ಭಾಷೆ–** ಕನ್ನಡ, ಇಂಗ್ಲೀಷ್

**ಕೋರ್ ವಿಷಯಗಳು –** ಗಣಿತ ಮತ್ತು ಪರಿಸರ ಅಧ್ಯಯನ

**ಪ್ರಶ್ನೆ ಸಂಖ್ಯೆ 4: 8ನೇ ತರಗತಿಗೆ ಪರಿಗಣಿಸಿರುವ ವಿಷಯಗಳು ಮತ್ತು ಭಾಷೆಗಳು.**

**ಉತ್ತರ:** **ಪ್ರಥಮ ಭಾಷೆ–** ಕನ್ನಡ, ಇಂಗ್ಲೀಷ್, ಹಿಂದಿ, ಉರ್ದು, ಮರಾಠಿ, ತಮಿಳು, ತೆಲುಗು, ಸಂಸ್ಕೃತ, ಇಂಗ್ಲೀಷ್(NCERT for Adarsha Schools)

**ದ್ವಿತೀಯ ಭಾಷೆ–** ಕನ್ನಡ, ಇಂಗ್ಲೀಷ್

**ತೃತೀಯ ಭಾಷೆ–** ಕನ್ನಡ, ಇಂಗ್ಲೀಷ್, ಹಿಂದಿ, ಹಿಂದಿ(Durva–ಆದರ್ಶ ವಿದ್ಯಾಲಯ ಶಾಲೆಗಳಿಗೆ), ಉರ್ದು, ಸಂಸ್ಕೃತ, ತುಳು, ಕೊಂಕಣಿ(ಕನ್ನಡ, ದೇವನಾಗರಿ), ಅರೇಬಿಕ್, ಪರ್ಷಿಯನ್

**ಪ್ರಶ್ನೆ ಸಂಖ್ಯೆ 5: ಪ್ರಶ್ನೋತ್ತರ ಪತ್ರಿಕೆಯು ಕೇವಲ ಕಲಿಕಾಚೇತರಿಕೆ ಪಠ್ಯವಸ್ತುವನ್ನು ಮಾತ್ರ ಒಳಗೊಂಡಿರುತ್ತದೆಯೇ?**

**ಉತ್ತರ:** ಇಲ್ಲ. ಮಾನ್ಯ ಆಯುಕ್ತರು ಸಾ.ಶಿ.ಇಲಾಖೆರವರು ತಿಳಿಸಿರುವಂತೆ ಕಲಿಕಾ ಚೇತರಿಕೆಯ ಕಲಿಕಾ ಫಲಗಳು ಮತ್ತು ಪಠ್ಯವಸ್ತುವನ್ನಾಧರಿಸಿ ಪ್ರಶ್ನೋತ್ತರ ಪತ್ರಿಕೆಯನ್ನು ಸಿದ್ಧಪಡಿಸುವಂತೆ ಸೂಚಿಸಿರುತ್ತಾರೆ. ಅದರಂತೆ ಪ್ರಶ್ನೆಗಳನ್ನು ರಚಿಸುವಾಗ ಕಲಿಕಾ ಫಲಗಳು ಮತ್ತು 2ನೇ ಸಂಕಲನಾತ್ಮಕ ಮೌಲ್ಯಮಾಪನಕ್ಕೆ ಒಳಪಡುವ ಘಟಕಗಳನ್ನು ಮ್ಯಾಪ್ ಮಾಡಿ ಪ್ರಶ್ನೆಗಳನ್ನು ಸಿದ್ಧಪಡಿಸಲಾಗಿರುತ್ತದೆ.

**ಪ್ರಶ್ನೆ ಸಂಖ್ಯೆ 6: ಮಂಡಲಿಯಿಂದ ಬಿಡುಗಡೆ ಮಾಡಲಾಗಿರುವ ಮಾದರಿ ಪ್ರಶ್ನೋತ್ತರ ಪತ್ರಿಕೆಯಲ್ಲಿ 5ನೇ ತರಗತಿಯ ಗಣಿತ ಹಾಗೂ ಪರಿಸರ ಅಧ್ಯಯನ ಮತ್ತು 8ನೇ ತರಗತಿಯ ಗಣಿತ ಹಾಗೂ ಸಮಾಜ ವಿಜ್ಞಾನ ವಿಷಯಗಳಲ್ಲಿ SA–1 ಗೆ ಸಂಬಂಧಿಸಿದ ಪ್ರಶ್ನೆಗಳು ಇರುತ್ತವೆ.**

**ಉತ್ತರ:** ಕಲಿಕಾಫಲಗಳು ಮತ್ತು ಪಠ್ಯವಸ್ತುವನ್ನಾಧರಿಸಿ ಪ್ರಶ್ನೋತ್ತರ ಪತ್ರಿಕೆಯನ್ನು ಸಿದ್ಧಪಡಿಸಬೇಕಾದ್ದರಿಂದ ನವಂಬರ್ 2022 ಮಾಹೆಯಿಂದ ಮಾರ್ಚ್ 2023 ರ ಮಾಹೆಯ ಮೊದಲನೇ ವಾರದವರೆಗೆ ನಿಗದಿಪಡಿಸಿರುವ ಘಟಕಗಳು ಹಾಗೂ ಸದರಿ ಘಟಕಗಳಿಗೆ ಕಲಿಕಾಚೇತರಿಕೆಯಲ್ಲಿ ನಿಗದಿಪಡಿಸಿರುವ ಕಲಿಕಾಫಲಗಳು ಒಂದನ್ನೊಂದು ಹೊಂದಿಕೆಯಾಗುವಂತೆ ಪ್ರಶ್ನೆಗಳನ್ನು ಸಿದ್ಧಪಡಿಸಲಾಗಿರುತ್ತದೆ.

ಕಲಿಕಾ ಚೇತರಿಕೆಯನ್ನು ಅಳವಡಿಸಿಕೊಂಡಿರುವ ಶಾಲೆಗಳಲ್ಲಿ ಪಠ್ಯಪುಸ್ತಕದಲ್ಲಿ SA-2 ಗೆ ನಿಗದಿಪಡಿಸಿರುವ ಘಟಕಗಳಿಗೆ ಸಂಬಂಧಿಸಿದ ಕಲಿಕಾ ಫಲಗಳನ್ನು SA–1 ನಲ್ಲಿಯೇ ಪೂರ್ಣಗೊಳಿಸಿರುತ್ತಾರೆ. ಆದ್ದರಿಂದ ಪಠ್ಯಪುಸ್ತಕ ಮತ್ತು ಕಲಿಕಾ ಚೇತರಿಕೆಯ ಕಲಿಕಾಫಲಗಳನ್ನು ಬೋಧಿಸಿರುವ ಎಲ್ಲಾ ಶಾಲೆಗಳಿಗೆ ಒಂದೇ ತೆರನಾದ ಪ್ರಶ್ನೆಗಳನ್ನು ನೀಡಬೇಕಾಗಿದ್ದರಿಂದ SA-2 ಗೆ ನಿಗದಿಪಡಿಸಿರುವ ಎಲ್ಲಾ ಘಟಕಗಳನ್ನು ಪರಿಗಣಿಸಿ ಅದಕ್ಕೆ ಸಂಬಂಧಿಸಿದ ಕಲಿಕಾಚೇತರಿಕೆ ಕಲಿಕಾ ಫಲಗಳನ್ನು SA-1 ಮತ್ತು SA-2 ನಿಂದ ಪರಿಗಣಿಸಲಾಗಿರುತ್ತದೆ. ಇದರೊಂದಿಗೆ ಪಠ್ಯಪುಸ್ತಕದ ಅಭ್ಯಾಸ ಚಟುವಟಿಕೆಯಲ್ಲಿರುವ ಎಲ್ಲಾ ವ್ಯಾಕರಣಾಂಶಗಳು ಮತ್ತು ಭಾಷಾಂಶಗಳನ್ನು ಪರಿಗಣಿಸಲಾಗಿರುತ್ತದೆ.

**ಪ್ರಶ್ನೆ ಸಂಖ್ಯೆ 7: ಕೋರ್ ವಿಷಯಗಳಿಗೆ ಸಂಬಂಧಿಸಿದಂತೆ ಮೌಲ್ಯಾಂಕನಕ್ಕೆ ಪರಿಗಣಿಸಿರುವ ಘಟಕಗಳು ಮತ್ತು ಕಲಿಕಾ ಫಲಗಳ ಪಟ್ಟಿಯನ್ನು ವೆಬ್‌ಸೈಟ್‌ನಲ್ಲಿ ಲಭ್ಯಮಾಡಲಾಗುವುದೇ?**

**ಉತ್ತರ:** ಹೌದು, ಪ್ರಶ್ನೆಪತ್ರಿಕೆ ಸಿದ್ಧಪಡಿಸುವ ಸಂದರ್ಭದಲ್ಲಿ ಪರಿಗಣಿಸಿರುವ ಘಟಕಗಳು ಮತ್ತು ಕಲಿಕಾ ಚೇತರಿಕೆಯ ಕಲಿಕಾಫಲಗಳ ಪಟ್ಟಿಯನ್ನು ವೆಬ್‌ಸೈಟ್‌ನಲ್ಲಿ ಲಭ್ಯಮಾಡಲಾಗುವುದು.

**ಪ್ರಶ್ನೆ ಸಂಖ್ಯೆ 8: ಕಲಿಕಾ ಚೇತರಿಕೆ ಅಳವಡಿಸಿಕೊಂಡಿರುವ ಮತ್ತು ಪಠ್ಯವನ್ನು ಬೋಧಿಸುತ್ತಿರುವ ಶಾಲೆಗಳಿಗೆ ಪ್ರಶ್ನೆಪತ್ರಿಕೆಯು ಒಂದೇ ರೀತಿಯಾಗಿರುತ್ತದೆಯೇ?**

**ಉತ್ತರ:** ಹೌದು, ಇಬ್ಬರಿಗೂ ಒಂದೇ ರೀತಿಯಾದ ಪ್ರಶ್ನೋತ್ತರ ಪತ್ರಿಕೆಯನ್ನು ನೀಡಬೇಕಾಗಿರುವುದರಿಂದ ಕೋರ್ ವಿಷಯಗಳಾದ ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನ ವಿಷಯಗಳಿಗೆ ಸಂಬಂಧಿಸಿದಂತೆ ವಿವರಣಾತ್ಮಕ ಪ್ರಶ್ನೆಗಳಿಗೆ alternative question ನೀಡಲಾಗಿದೆ.

**ಪ್ರಶ್ನೆ ಸಂಖ್ಯೆ 9: ಮೌಲ್ಯಾಂಕನ ಕಾರ್ಯಕ್ಕೆ ನಿಗದಿಪಡಿಸಿರುವ ಸಮಯ.**

**ಉತ್ತರ:** ಮಾನ್ಯ ಆಯುಕ್ತರ ಸುತ್ತೋಲೆಯಂತೆ 2 ಗಂಟೆ ಸಮಯವನ್ನು ನಿಗದಿಪಡಿಸಲಾಗುತ್ತದೆ. ಈ ಸಂಬಂಧ ಹೆಚ್ಚಿನ ವಿವರವನ್ನು ಮಾರ್ಗಸೂಚಿಯಲ್ಲಿ ನೀಡಲಾಗುವುದು.

**ಪ್ರಶ್ನೆ ಸಂಖ್ಯೆ 10: ಮೌಲ್ಯಾಂಕನದ ಪ್ರಶ್ನೋತ್ತರ ಪತ್ರಿಕೆಯು ಮಾದರಿ ಪ್ರಶ್ನೋತ್ತರ ಪತ್ರಿಕೆಯ ಮಾದರಿಯಲ್ಲಿಯೇ ಇರುತ್ತದೆಯೇ?**

**ಉತ್ತರ:** ಹೌದು.

**ಪ್ರಶ್ನೆ ಸಂಖ್ಯೆ 11: ಮಾದರಿ ಪ್ರಶ್ನೋತ್ತರ ಪತ್ರಿಕೆಯಲ್ಲಿ ಪರಿಗಣಿಸಿರುವ ಘಟಕಗಳು ಮತ್ತು ಕಲಿಕಾಫಲಗಳನ್ನೇ ಪರಿಗಣಿಸಲಾಗಿರುತ್ತದೆಯೇ?**

**ಉತ್ತರ:** ಹೌದು.

~*~*~*~